ನಿಶ್ಶಕ್ತಿಯಿದೆ. ಅವರು ಏಳುವುದಿಲ್ಲ. ಅಲ್ಲಿಯೇ ಮಲಗಿರುತ್ತಾರೆ. ಗಲ್ಲಿಯ ಮೂರ್‍ನಾಲ್ಕು ಜನ ಅವರೊಂದಿಗೆ ಮಾತನಾಡಲು ಪ್ರಯತ್ನಿಸುತ್ತಾರೆ. ಆದರೆ ಅವರು ಯಾರಿಗೂ ಉತ್ತರಿಸುವುದಿಲ್ಲ.

ಅವರ ಸಮೀಪದಿಂದ ಮೊಮ್ಮಗ-ಮೊಮ್ಮಗಳು ಹೆಗಲ ಮೇಲೆ ಬ್ಯಾಗ್ ಹೊತ್ತು ಮನೆಗೆ ಮರಳಿ ಬರುತ್ತಾರೆ. ಅವರು ಇಬ್ಬರನ್ನೂ ನೋಡುತ್ತಾರೆ. ಅವರ ಸೊಸೆ ಸಹ ಕಚೇರಿಯಿಂದ ಬಂದು ಅವರ ಸಮೀಪದಿಂದಲೇ ಮನೆಯೊಳಗೆ ಹೋಗುತ್ತಾಳೆ. ಅವರು ಸೊಸೆಯನ್ನು ಸಹ ನೋಡುತ್ತಾರೆ. ಅವರ ಮಗ ಸಹ ಕಚೇರಿಯಿಂದ ಬಂದು ಅವರ ಸಮೀಪದಿಂದಲೇ ಮನೆಯೊಳಗೆ ಹೋಗುತ್ತಾನೆ. ದಾಸ್ ಬಾಬೂ ಮಗನನ್ನು ಸಹ ನೋಡುತ್ತಾರೆ. ಮನೆಯೊಳಗೆ ಹೋಗುವಾಗ ಎಲ್ಲರೂ ಒಮ್ಮೆ ಅವರನ್ನು ಖಂಡಿತ ನೋಡಿದ್ದಾರೆ. ಆದರೆ ಯಾರೂ ಅವರೊಂದಿಗೆ ಒಂದು ಮಾತೂ ಸಹ ಆಡಲಿಲ್ಲ. ತಮ್ಮ ಗುರುತೇ ಇಲ್ಲವೆಂಬಂತೆ ಎಲ್ಲರೂ ಮನೆಯೊಳಗೆ ಹೋಗಿರುತ್ತಾರೆ. ಈಗ ದಾಸ್ ಬಾಬೂ ದೀರ್ಘವಾಗಿ ಉಸಿರಾಡುತ್ತಾರೆ. ಕ್ರಮೇಣ ಅಂಧಕಾರ ಕವಿಯುತ್ತದೆ. ಈಗ ಅವರು ಎದ್ದು ಕೂರುತ್ತಾರೆ. ಆರೋಗ್ಯ ಮೊದಲಿಗಿಂತ ಸುಧಾರಿಸಿದೆ ಎಂದು ಅನ್ನಿಸುತ್ತದೆ. ದಾಸ್ ಬಾಬೂ ಎದ್ದು ನಿಲ್ಲುತ್ತಾರೆ. ಡೋರ್-ಬೆಲ್ ಒತ್ತುತ್ತಾರೆ. ಮನೆ ಕೆಲಸದವಳು ಬಾಗಿಲು ತೆರೆಯುತ್ತಾಳೆ. ಅವರು ಈಗ ಮೆಟ್ಟಿಲುಗಳ ರೇಲಿಂಗ್ ಹಿಡಿದು ಎರಡು ಮೆಟ್ಟಿಲು ಹತ್ತುತ್ತಾರೆ. ಆಗ ಅವರು ಊಟದ ಟೇಬಲ್ ಸುತ್ತಮುತ್ತ ಎಲ್ಲರೂ ಕೂತು ಒಟ್ಟಿಗೆ ಊಟ ಮಾಡುತ್ತಿರುವುದನ್ನು ನೋಡುತ್ತಾರೆ. ಒಂದು ಕುರ್ಚಿ ಖಾಲಿಯಿದೆ. ಅವರು ಹೋಗಿ ಆ ಕುರ್ಚಿಯಲ್ಲಿ ಕೂರುತ್ತಾರೆ. ಅವರು ಕೂರುತ್ತಲೇ ಎಲ್ಲರೂ ಊಟ ಮಾಡುವುದನ್ನು ನಿಲ್ಲಿಸಿ ಅವರನ್ನೇ ನೋಡುತ್ತಾರೆ.

ದಾಸ್ ಬಾಬೂ ಅವರ ಹೆಂಡತಿ ಕೇಳುತ್ತಾಳೆ, 'ಸ್ವಲ್ಪ ಊಟ ಮಾಡ್ತೀರ?'

ದಾಸ್ ಬಾಬೂ ಹೇಳುತ್ತಾರೆ, 'ಮಾಡ್ತೀನಿ. ಆದರೆ...'

'ಆದರೇನು?'

'ನೀವೆಲ್ಲಾ ಯಾರು?'

'ನನ್ನನ್ನು ಗುರುತಿಸುತ್ತಿಲ್ವ? ನಾನು ನಿಮ್ಮ ಹೆಂಡತಿ.'

'ಇದು ಸುಳ್ಳು' ಎಂದು ದಾಸ್ ಬಾಬೂ ಮಗ ಮತ್ತು ಸೊಸೆಯನ್ನು ನೋಡುತ್ತಾ ಕೇಳುತ್ತಾರೆ, 'ನೀವೆಲ್ಲಾ ಯಾರು?'

'ನಾನು ನಿಮ್ಮ ಮಗ' ಎನ್ನುತ್ತಾನೆ ಮಗ.

'ನಾನು ನಿಮ್ಮ ಸೊಸೆ' ಎನ್ನುತ್ತಾಳೆ ಸೊಸೆ.

'ಇದು ಸುಳ್ಳು' ಎಂದು ದಾಸ್ ಬಾಬೂ ಮೊಮ್ಮಗ-ಮೊಮ್ಮಗಳನ್ನು ನೋಡುತ್ತಾ ಕೇಳುತ್ತಾರೆ, 'ನೀವ್ಯಾರು?'

ಸೊಸೆ ಹೇಳುತ್ತಾಳೆ,'ಇವರು ನಿಮ್ಮ ಮೊಮ್ಮಗ-ಮೊಮ್ಮಗಳು. ನಿಮಗೆ ಇವರ ಗುರ್ತು ಸಿಗಲಿಲ್ಲವೇ?'

'ಇಲ್ಲ, ನನಗ್ಯಾರ ಗುರುತೂ ಇಲ್ಲ. ನೀವೆಲ್ಲಾ ಯಾರು?'

ದಾಸ್ ಬಾಬೂ ಅವರ ಹೆಂಡತಿ ಹೇಳುತ್ತಾಳೆ, 'ನಿಮಗೆ ತಲೆ ಕೆಟ್ಟಿದೆ. ಈಗ ನೀವು ಊಟ ಮಾಡಿ ಮಲಗಿ.'

ಮಗ ಹೇಳುತ್ತಾನೆ, 'ಈಗ ಅಪ್ಪನನ್ನು ಖಂಡಿತಾ ವೈದ್ಯರಿಗೆ ತೋರಿಸುವ ಅಗತ್ಯವಿಲ್ಲ.'

ದಾಸ್ ಬಾಬೂ ಹೇಳುತ್ತಾರೆ, 'ಈಗ ನನ್ನನ್ನು ವೈದ್ಯರಿಗೆ ತೋರಿಸುವ ಅವಶ್ಯಕತೆಯಿಲ್ಲ. ವೈದ್ಯರ ಅಗತ್ಯ ನಿಮಗಿದೆ' ಹೀಗೆಂದು ಅವರು ಕುರ್ಚಿ ಬಿಟ್ಟು ಎದ್ದು ನಿಲ್ಲುತ್ತಾರೆ. ನಂತರ ತಮ್ಮ ಕೋಣೆಗೆ ಹೊರಟು ಹೋಗುತ್ತಾರೆ.

ದಾಸ್ ಬಾಬೂ ಅವರ ಹೆಂಡತಿ ಕೇಳುತ್ತಾಳೆ, 'ಏಕೆ ಎದ್ದಿರಿ? ಊಟ ಮಾಡಲ್ವ?'

'ಇಲ್ಲ.'

ಮರುದಿನ ದಾಸ್ ಬಾಬೂ ಸಹಜವಾದರು. ಅವರು ಈಗ ಪೇಟೆಗೆ ಹೋಗಲು ಸಿದ್ಧರಾಗುತ್ತಾರೆ. 'ಇಂದೇನು ತರಬೇಕು?' ಎಂದು ಹೆಂಡತಿಯನ್ನು ಕೇಳುತ್ತಾರೆ.

'ಹೆಸರು ಬೇಳೆ, ಅರಿಸಿನ, ಸಾಸಿವೆ, ಉಪ್ಪು, ಗಸಗಸೆ.'

ಮಗ ಬಂದು ಹೇಳುತ್ತಾನೆ,'ನನಗೊಂದು ಪ್ಯಾಕ್ ಶೇವಿಂಗ್-ಬ್ಲೇಡ್ಸ್ ತನ್ನಿ.'

ಸೊಸೆ ಬಂದು ಹೇಳುತ್ತಾಳೆ, 'ನನಗೊಂದು ಸೆಂಟ್ ಹೇರ್-ಆಯಿಲ್ ತನ್ನಿ.'

ಮಗಳ ಮಗ ಬಂದು ಹೇಳುತ್ತಾನೆ, 'ನನಗೊಂದು ಪ್ಯಾಕೇಟ್ ಹುರಿದ ಕಡಲೆ ತನ್ನಿ.'

ಮೊಮ್ಮಗಳು ಬಂದು ಹೇಳುತ್ತಾಳೆ, 'ಅದನ್ನೇ ನನಗೂ ಒಂದು ಪ್ಯಾಕೇಟ್ ತನ್ನಿ.'

●